

ಮುಕುಂದ ರಾಯರ ಧ್ವನಿಗೆ ಮಾರುತ್ತರ ಬರಲಿಲ್ಲ. ಆತ ಪಿಳಿಪಿಳಿ ಕಣ್ಣು ಬಿಟ್ಟರು. ಇನ್ನೊಮ್ಮೆ ಜೋರಾಗಿ ಕೂಗಿದ್ದಕ್ಕೆ ಇಡೀ ಹೋಟೆಲ್ಲೇ ಇವರ ಕಡೆಗೆ ತಿರುಗಿತು. 'ಏನು ಮನುಷ್ಯರೋ ಏನೋ? ಕೂತಲ್ಲೇ ಕುಂಡೆ ಮರೀತಾರೆ ಎಲ್ಲೋ ಬಿಡೋದು ಇಲ್ಲಿ ಬಂದು ಹುಡುಕೋದು...' ಎಂಬ ಮಾತುಗಳು. ಮುದುಕರ ಕೋಲು ಇಷ್ಟುದ್ದ ಚಾಚಿದ್ದನ್ನ ಕಾಣದೇ ಕ್ಲೀನರ್ ಎಡವಿದ, ಟ್ರೇ ಸಹಿತ ಬಿದ್ದ. ಕ್ಯಾಶ್‌ನಲ್ಲಿದ್ದ ರೊಣೆ ರೊಣೆ ಮೀಸೆಯ ಠೊಣೆಯ ಬಂದು ಆ ಕ್ಲೀನರ್‌ನ ಕಪಾಳಕ್ಕೆ ಬಾರಿಸಿದ. ಆ ಹುಡುಗ ತತ್ತರಿಸಿ ಕೆಳಕ್ಕೆ ಬಿದ್ದ. ಸುತ್ತ ಜನ ಸೇರಿದರು. 'ನಾಟಕ ಸೂಳೆಮಕ್ಕಳದ್ದು, ಈಗ ತಾನೆ ಇಡ್ಲಿ, ವಡೆ ಗದುಮಿದ್ದಾನೆ. ಕ್ಲೀನ್ ಮಾಡಾಕೆ ಸಾಯ್ತಾನೆ. ಯಾರು ಇವರಪ್ಪ ಬಂದು ಕ್ಲೀನ್ ಮಾಡುತ್ತಾನಾ? ಹಡಬೆಗುಟ್ಟಿದ್ದು' ಎಂದು ಬೈದು ಬಿದ್ದವನು ಏಳುವಷ್ಟರಲ್ಲಿ ಠೊಣೆಯ ಮತ್ತೆ ಒದ್ದ. 'ರೀ ನಿಮಗೆ ಅವನ ಕೆಲಸ ಸರಿಯಾಗದಿದ್ರೆ ಬಿಡ್ಸಿ. ಒದೆಯೋಕೆ ಬೈಯೋಕೆ ನಿಮ್ಗೆ ಹಕ್ಕಿಲ್ಲ. ಇದು ಡೆಮಕ್ರೆಸಿ...' ಎಂದು ಗಡ್ಡದಾರಿಯೊಬ್ಬ ಉರಿಯುತ್ತ ಹೇಳಿದ. 'ನಾನು ಇವ್ರಪ್ಪಂಗೆ ಸಾಲ ಕೊಟ್ಟಿದ್ದೀನಿ, ಅದ್ನ ನೀವು ತೀರ್ಸಿ. ಕೂಡ್ಲೆ ಕರಕೊಂಡ್ ಹೋಗಿ ದೇವ್ರು...' ಎಂದ ಸಾಹುಕಾರನ ಮಾತಿಗೆ ಗಡ್ಡಧಾರಿ ತೆಪ್ಪಗಾದ. ಹುಡುಗ ಮತ್ತೆ ಟ್ರೇಗೆ ಎಲ್ಲಾ ಎತ್ತಿಹಾಕತೊಡಗಿದ. ಈ ಗಲಾಟೆಯಲ್ಲಿ ಕೊಡೆಯ ಸುದ್ದಿ ಎತ್ತುವುದು ಹೇಗೆ? ಮುಕುಂದರಾವ್ ಇಲ್ಲಿ ಬಿಟ್ಟರಲಿಕ್ಕಿಲ್ಲ ಎಂದು ರಸ್ತೆಗಿಳಿದರು. ಮನೆಯ ದಾರಿ ಸಿಕ್ಕರೂ ಕೊಡೆ ಸಿಗದೇ ಮನೆಗೆ ಹೋಗುವಂತಿಲ್ಲ. ಮೊದಲು ಒಂದು ಕೊಡೆ ಜತೆಮಾಡಿಕೊಳ್ಳಬೇಕು. ಬ್ಯಾಂಕ್, ಮಾರ್ಕೆಟ್, ಹೋಟೆಲ್, ಅಂಗಡಿ ಯಾವುದಾದರೊಂದು ಕಡೆ ತನ್ನಂಥ ಒಬ್ಬ ಮರೆಗುಳಿ ಕೊಡೆ ಬಿಟ್ಟಿರುತ್ತಾನೆ. ಒಂದು ಕೊಡೆ ಹಾರಿಸಬೇಕು. ಹಾಗೆ ಮನೆಗೆ ಹೋದರೆ ಅಲ್ಲಿ ದೊಡ್ಡ ಯುದ್ಧವೇ ನಡೆಯುತ್ತದೆ.

'ಒಂದು ವರ್ಷದಲ್ಲಿ ಎಷ್ಟು ಕೊಡೆ ಕಳೆಯುತ್ತೀರಿ? ಮರೆವು ಅಂದರೆ ಅದೇಂತ ಮರೆವು. ಕೂರಲು ಹಾಕಿಸಿಕೊಂಡ ಕರ್ಚೀಫ್, ಸೈನ್ ಮಾಡಲು ಇನ್ನೊಬ್ಬರಿಗೆ ಕೊಟ್ಟ ಪೆನ್ನು, ಗುರುತಿನವರೆಗೆ ಕೊಟ್ಟ ಕೈಗಡ ಏನೆಲ್ಲ ಮರಿತೀರಿ. ಒಂದು ದಿನ ನನ್ನನೇ ಮರೆತು ಬಂದಿರಲ್ಲ ಮಹಾರಾಯ. ಪೇಟೆಯಲ್ಲಿ' ಎಂದು ಹೆಂಡತಿ ಬೈಯುತ್ತಾಳೆ. ಹೆಸರು, ಊರು, ಕೇರಿ, ಜನ, ಪೇಟೆ, ಅಂಗಡಿ ಎಲ್ಲಾ ಮರೆಯುತ್ತೆ. ಮನೆ ಬಾಗಿಲು ಮರೆಯುತ್ತೆ. ಅಂಗಳ, ಹಳೆ ಬಾವಿ ಎಲ್ಲಾ ಮರೆಯುತ್ತೆ ಅಥವಾ ಎಲ್ಲಾ ನಂದೆ ಅನ್ನುವ ಹಾಗೆ ಕಾಣುತ್ತೆ... ಕೊಡೆ ನರಸಿಂಗರಾವ್‌ದಾದರೇನು? ದುಗ್ಗೋಜಿಯದಾದರೇನು? ಕೊಡೆ ಕೊಡೆಯಲ್ಲವೇ? ಒಂದು ಕೊಡೆ ಹಾರಿಸಿಬಿಡಬೇಕು ಎಂಬ ಹಂಬಲ ತೀವ್ರವಾಯಿತು. ಕದಿಯುವ ಯೋಚನೆ ಬಂದಿದ್ದೇ ಬ್ಯಾಂಕ್‌ನ ಕಡೆ ಹೆಜೆ ಹಾಕಿದ್ದರು ಮುಕುಂದರಾಯರು. ಛೆ! ಎಂಥ ದರಿದ್ರ ಯೋಚನೆ. ಕದಿಯಲು ಹೋಗಿ ಸಿಕ್ಕಿಕೊಂಡರೆ. ತಾನು ತಪ್ಪಿಸಿಕೊಳ್ಳಲು ಒಂದು ಕಳ್ಳತನವೇ? ಮನೆಯಲ್ಲಿ ಬೈದರೆ ಬೈಯಲಿ. ಉಪವಾಸ, ಅದಕ್ಕೂ ಸಿದ್ಧ. ಬೈತಾ ಬೈತಾ ಸಾಯಬಹುದು. ಕಳ್ಳತನವೇ? ಅದು ಈ ಸಾಯುವ ವಯಸ್ಸಿನಲ್ಲಿ... ಕೊಡೆ ಇಲ್ಲಿದ್ರೆ ಹಾಳಾಗಿ ಹೋಗ್ಲಿ. ಮೊದಲು ಮನೆಯ ದಾರಿ ಹಿಡಿಯಬೇಕು ಎಂದುಕೊಂಡು ನಡೆಯತೊಡಗಿದರು.

ಆ ರಸ್ತೆ ಒಂದು ಕಿರು ರಸ್ತೆಯನ್ನು ಪರಿಚಯಿಸಿತು. ನೋಡ ನೋಡುತ್ತಿದ್ದಂತೆ ಎರಡು ನಾಯಿಗಳು ಒಂದು ಹೆಣ್ಣು ನಾಯಿಯನ್ನು ಬೆನ್ನಟ್ಟಿ ಬಂದವು. ಆ ಗಡವ ಸಣಕಲನ ಕುತ್ತಿಗೆಗೆ ಬಾಯಿ ಹಾಕಿತು. ಅದು ಪ್ರಾಣಾಂತಿಕವಾಗಿ ನರಳತೊಡಗಿತು. ಅದನ್ನು ನೋಡಿ ಹೆಣ್ಣು ಬಾಲ ಮುದುರಿಕೊಂಡಿತು. ಈ ಕಾಳಗ ನೋಡುತ್ತಿದ್ದ ಒಂದು ಹಂಡಹುಂಡ ನಾಯಿ ಹೆಣ್ಣಿನ ಬೆನ್ನುಹತ್ತಿತು. ಗಡವ ಏಕ್ದಂ ಸಣಕಲನನ್ನು ಬಿಟ್ಟು ಹಂಡಹುಂಡದ ಜತೆಗೆ ಯುದ್ಧಕ್ಕೆ ನಿಂತಿತು. ಸಣಕಲ ಬದುಕಿದರೆ ಬೇಡಿ ತಿನ್ನಬಹುದೆಂದು ಕೈಲಾದಷ್ಟು ಜೋರಾಗಿ ತೆವಳುತ್ತಾ ಮರೆಯಾಯಿತು. ಹಂಡಹುಂಡಕ್ಕೆ ಗಡವ ಬಲವಾಗಿ ಕಚ್ಚಿ ಅದರ ಮೈಮೇಲೆ ಗಾಯ ಮಾಡಿತು. ಮುಕುಂದರಾಯರಿಗೆ ಗಡವನನ್ನು ಬಿಡಿಸಿ ಓಡಿಸಬೇಕೆನ್ನಿಸಿ ಕಲ್ಲಿಗಾಗಿ ಹುಡುಕಿದರು. ಅಲ್ಲೇ ಒಬ್ಬ ಹುಡುಗ ಸೈಕಲ್ ಚಕ್ರವನ್ನು ಹೊಡೆಯುತ್ತ 'ಪೊವಾಯ್ ಪೋವಾಯ್ ಸೈಡ್ ಬಿಡ್ರಿ' ಎಂದು ಕೂಗುತ್ತ ಬಂದ. ಆ ಚಕ್ರ ನಾಯಿಗಳ ಮೇಲೆ ನುಗ್ಗಿ ಅವೆರಡಕ್ಕೂ ಕುಣಿಕೆಯಾಗಿ ಬಿತ್ತು. ನಾಯಿಗಳು ಅಡ್ಡಾದಿಡ್ಡಿ ನುಗ್ಗಿ ಚಕ್ರದಲ್ಲಿ ಸಿಕ್ಕಿಕೊಂಡವು. ಹುಡುಗ ಚಕ್ರ ಬಿಡಿಸಿಕೊಳ್ಳಲು ಆತುರಪಡತೊಡಗಿದ. ಆದರೆ ನಾಯಿ ಕಚ್ಚಿದರೆ ಹದಿನಾಲ್ಕು ಇಂಜೆಕ್ಷನ್ ಹೊಟ್ಟೆ ಸುತ್ತ, ಮರೆತರೆ ಗುಡುಗು–ಸಿಡಿಲು ಬಂದಾಗ ನಾಯಿ ಕೂಗಿದ ಹಾಗೆ ಕೂಗಿ ಕೂಗಿ, ನೀರು ಕಂಡರೆ ಭಯ ಬೆಳಕಿಗೆ ಅಂಜುತ್ತ ನೊರೆಗರೆದರು ಸಾಯಬೇಕು... ಬೊಗಳಿ ಬೊಗಳಿ ಸಾಯಬೇಕು. ಎಂದು ಕೇಳಿದ್ದ ಹುಡುಗ, ಅವೆರಡಕ್ಕೂ ತಯಾರಿರಲಿಲ್ಲ. ಬೆಪ್ಪನಂತೆ ಸುಮ್ಮನೆ ನಿಂತ. ಅವನ